(*d*) Does not arise.

(*e*) This will be known after surveys and investigations are completed. This work is taken up by the Investigation Unit.

Sri Y. VEERAPPA.—With reference to (*a*), may I know whether there is scope for expanding the irrigable area under these channels?

†**Sri H. M. CHANNABASAPPA.**—That is a separate question. If a separate question is put, I will be happy to answer the same.

Sri Y. VEERAPPA.—With reference to (*b*), I want to know whether there is any scope for having some more pick-ups?

Sri H. M. CHANNABASAPPA.—The survey is going on and after the survey, it will be known and the possibilities will be examined.

Sri Y. VEERAPPA.—In answer to (*c*), you have said that 135 tanks have been completed. May I know whether in respect of the rest of the tanks, estimates are completed?

Sri H. M. CHANNABASAPPA.—It does not mean that all the rest of the tanks need restoration. Some may require restoration and some may not need restoration. The whole thing is under examination by the minor Irrigation Circle.

Sri Y. VEERAPPA.—When are you going to complete it?

Sri H. M. CHANNABASAPPA.—It is under way. It is the earnest desire of the Government to complete it as early as possible.

Demolition of Building of Shri Jayadevappa by the Harihar Municipality

Q.*—262. **Smt. NAGARATHNAMMA (Gandhinagar).—

Will the Government be pleased to state:—

(*a*) whether it is a fact that the Harihar Municipality granted license to Sri T. Jayadevappa of Harihar to effect repairs to his house;

(*b*) whether it is a fact that recently the Municipality has demolished the entire building on the plea that the said Sri T. Jayadevappa has effected unauthorised construction of the house;

(*c*) if so, the date on which the Municipality decided to demolish the building;

(*d*) whether it is a fact that the said Sri T. Jayadevappa made a representation to the Deputy Commissioner, Chitaldrug District, requesting him to cancel the decision of the Municipality;

(*e*) whether it is a fact that the Deputy Commissioner, Chitaldrug, rejected the representation of Sri T. Jayadevappa;

(*f*) whether it is a fact that even the programme was fixed for the spot inspection by the Local Self-Government Minister?

A.—**Sri T. SUBRAMANYA** (Minister for Law, Labour and Local Self-Government).—

(*a*) It is reported that license was granted by the Harihar Municipality to effect certain repairs to a shop building and not for repairing a house.

(*b*) It is reported that Sri T. Jayadevappa razed the old structure to ground, put a new foundation with a plinth area of 30′×34′ and unauthorisedly constructed a new building and that the structure demolished was not the same as that for which permission to repair had been granted.

(*c*) On 24th December 1959.

(*d*) A petition requesting the Deputy Commissioner to act under Section 199 of the Mysore Town Municipalities Act, 1951 was given.

(*e*) There was a petion praying for action under Section 199 accompanied by a request for stay. Stay Order was refused.

(*f*) No such programme had been fixed. But the Minister for Local Self-Government had told Sri T. Jayadevappa's Advocate that he would be visiting Harihar on 29th December 1959.

ಶ್ರೀಮತಿ ನಾಗರತ್ನಮ್ಮ.—ನನ್ನ ಪ್ರಶ್ನೆಯ (ಬ) ಕ್ಕಾಜಿಗೆ ಉತ್ತರವಾಗಿ "ಕೆಡವಿಹಾಕಲ್ಪಟ್ಟ ಕಟ್ಟಡವು ಯಾವ ಕಟ್ಟಡದ ಸಂಬಂಧದಲ್ಲಿ ದುರಸ್ತಿಗಳಿಗಾಗಿ ಅನುಮತಿಯನ್ನು ಕೊಡಲಾಗಿದ್ದಿತ್ತೋ ಆ ಕಟ್ಟಡವಲ್ಲ ವೆಂದು ವರದಿಯಾಗಿದೆ" ಎಂಬುದಾಗಿ ಅಚ್ಚಾಕೊಡಿಸಿದ್ದೀರಿ. ಆ ರೀತಿ ವರದಿಮಾಡಿರುವವರು ಯಾರು? ಸತ್ಯವನ್ನು ಸುಳ್ಳು ಎಂದು ಬರೆದರೆ ಅದನ್ನು ನಂಬುತ್ತೀರಾ?

†ಶ್ರೀ ಟಿ. ಸುಬ್ರಹ್ಮಣ್ಯ.—ಆ ರೀತಿ ವರದಿಮಾಡಿದವರು ಮುನಿಸಿಪಾಲಿಟಿಯವರು ಮತ್ತು ಡೆಪ್ಯುಟಿ ಕಮಿಷನರ್ ಅವರು. ಅವರು ಸತ್ಯವನ್ನು ಸುಳ್ಳಾಗಿ ಬರೆದಿದ್ದಾರೆಂದು ಹೇಳುವುದಕ್ಕೆ ನನಗೆ ಸಾಕಾದಷ್ಟು ಆಧಾರವಿಲ್ಲ.

ಶ್ರೀಮತಿ ನಾಗರತ್ನಮ್ಮ.—ಈ ಬಗ್ಗೆ ಚಿತ್ರದ ಗ್ರಡೆಪ್ಯುಟಿ ಕಮಿಷನರ್ ಆಫೀಸಿನ ಅಧಿಕಾರಿಗಳು ಪಕ್ಷಪಾತ ದೃಷ್ಟಿಯನ್ನಿಟ್ಟುಕೊಂಡು ಜಬರದಸ್ತಿನಿಂದ ಕಟ್ಟಡವನ್ನು ಉರುಳಿಸಲಿಕ್ಕೆ ಆಜ್ಞೆಮಾಡಿದ್ದಾರೆಂಬುದಕ್ಕೆ ಸಕಾರಣಗಳನ್ನು ನಾನು ಕೊಟ್ಟರೆ ಆಗ ಏನು ಮಾಡುತ್ತೀರಿ ?

ಶ್ರೀ ಟಿ. ಸುಬ್ರಹ್ಮಣ್ಯ.—ಈಗ ಆ ವಿಷಯವನ್ನು ಚರ್ಚೆಮಾಡಿದರೆ ಸ್ವಲ್ಪ ಅನುಚಿತವಾಗಬಹುದು. ಈಗ ಈ ಕೇಸು ಹೈಕೋರ್ಟಿನಲ್ಲಿದೆ. ಅದು ಸಬ್ ಜುಡೀಸ್ ಕ್ರಿಮಿನಲ್ ಕೇಸಾಗಿದೆ. ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ.

1-30 P.M.

Sri M. RAMAPPA.—Is it not a fact that the Hon'ble Minister instructed the Municipal authorities not to execute the order because he was visiting Harihar on the 29th ?

Sri T. SUBRAMANYA.—Sir, I did not know that they had passed any such resolution. There was no time or occasion for me to issue such an instruction. But I came to know that they had passed a resolution on the 27th December, when I was about to start on my tour. I told the advocate that I would be coming there on the 29th at 9 o'clock in the night. I said; "I do not suppose that they will take action before that, I will come and instruct the Municipal authorities."

Mr. SPEAKER.—Question No. 313. The concerned Minister is not here. I will take it up later. Let us take up Question No. 144.

Election to Panchayat Board of Melur in Kolar District.

*Q.—444. Sri J. VENKATAPPA (Sidlaghatta).—

Will the Government be pleased to state :—

whether it is a fact that election to the Panchayat Board of Melur in Kolar District is stayed until further orders, and if so, the reasons therefor ?

A.—Sri T. SUBRAMANYA (Minister for Law, Labour and Local Self-Government).—

The elections are not stayed but they are postponed to a future date. As it was represented that there were serious irregularities in the delimitation of constituencies of the Panchayat and in the allotment of seats among the various constituencies, the Deputy Commissioner has been requested to postpone elections to this Panchayat, pending rectification of the irregularities alleged. The elections will be held, after this is done.

ಶ್ರೀ ಜೆ. ವೆಂಕಟಪ್ಪ.—ಕೆಲವು ಮಹನೀಯರ ಅಭಿಮತವನ್ನು ಪಡೆದು ಈ ಪಂಚಾಯತಿ ಬೋರ್ಡಿನ ಚುನಾವಣೆಯ ಕ್ಷೇತ್ರ ಹಾಗೂ ಸದಸ್ಯರ ಸಂಖ್ಯೆ ನಿಗದಿಯಾಗಿತ್ತಲ್ಲವೇ ?

†ಶ್ರೀ ಟಿ. ಸುಬ್ರಹ್ಮಣ್ಯ.—ಅವರು ತಪ್ಪುಲ್ಲಿ ಪರ್ಯಾಲೋಚನೆ ಮಾಡಲಿಲ್ಲವೆಂದು ಹೇಳಿದರು. ಆದರೆ ಅಬ್‌ಜಕ್ಷನ್ಸ್ ಫೈಲ್ ಮಾಡಲಾಗಿದ್ದಿತು. ಅದನ್ನು ಡೆಪ್ಯುಟಿ ಕಮಿಷನರಿಗೆ ಕಳುಹಿಸಿಬೆವು. ರಿಪೋರ್ಟ್ ಸಹ ಬಂತು. ರಿಪೋರ್ಟ್ ತೆಗೆದುಕೊಂಡ ಮೇಲೆ ಈಗ ಎಲೆಕ್ಷನ್ ನಡೆಸಬೇಕೆಂದು ಆರ್ಡರ್ ಮಾಡಿದ್ದೇವೆ.

ಶ್ರೀ ಜೆ. ವೆಂಕಟಪ್ಪ.—ಮತ್ತೆ ಎಂ. ಎಲ್. ಸಿ. ಅಭಿಪ್ರಾಯ ಪಡೆದು ಕ್ಷೇತ್ರಗಳನ್ನು ಏಂಗಡಿಸಬೇಕೆಂದು ಕಳುಹಿಸಿದ್ದೀರಾ ?

Sri T. SUBRAMANYA.—All M.L.As. and M.L.Cs. must be consulted as far as possible. That is what we said.

ಶ್ರೀ ಜೆ. ವೆಂಕಟಪ್ಪ.—ಅಲ್ಲಿನ ಚುನಾವಣೆಗೆ ನಿಂತ ಮಹನೀಯರು ಓಟರುಗಳ ಪಟ್ಟಿಯಲ್ಲಿ ಬಿಟ್ಟಿರಬಹುದಾದಂಥ 150 ಜನ ಓಟುಗಳ ಹೆಸರುಗಳನ್ನು ಸೇರಿಸಿಕೊಳ್ಳುವುದಕ್ಕೆ ಕಾಲಾತೀತವಾದುದರಿಂದ 150 ರೂಪಾಯಿಗಳ ದಂಡವನ್ನು ಉಳಿತಾಯ ಮಾಡಿಕೊಳ್ಳುವ ರೀತಿಯಲ್ಲಿ ಅವಕಾಶ ಮಾಡಿಕೊಂಡದ್ದು ವಿಫಲವಾಗಿದೆಯಲ್ಲವೇ ?

ಶ್ರೀ ಟಿ. ಸುಬ್ರಹ್ಮಣ್ಯ.—ಅದು ನನಗೆ ಗೊತ್ತಿಲ್ಲ.

ಶ್ರೀ ಜೆ. ವೆಂಕಟಪ್ಪ.—ಕೆಲವು ಮಹನೀಯರು 150 ರೂಪಾಯಿಗಳನ್ನು ಉಳಿತಾಯ ಮಾಡಿಕೊಳ್ಳುವುದಕ್ಕೋಸ್ಕರ ತಮ್ಮಿಂದ ಈ ಚುನಾವಣೆಯನ್ನು ಪೋಸ್ಟ್‌ಪೋನ್ ಮಾಡಿಸಿ ಆ ಮುಖಾಂತರ ಅವರಿಗೆ ಉಳಿತಾಯ ಮಾಡುವುದಕ್ಕೋಸ್ಕರ ನೀವು ಹೀಗೆ ಮಾಡಿದ್ದೀರಲ್ಲವೇ ?

ಶ್ರೀ ಟಿ. ಸುಬ್ರಹ್ಮಣ್ಯ.—ಅವರ ಉದ್ದೇಶ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಅಬ್‌ಜಕ್ಷನ್ಸ್ ಬಂತು. ಅವನ್ನು ಎಗ್ಸಾಮಿನ್ ಮಾಡಿ ಎಂದು ಡೆಪ್ಯುಟಿ ಕಮಿಷನರಿಗೆ ಕಳುಹಿಸಿದೆವು. ಅವರಿಂದ ವರದಿ ಸಹ ಬಂತು. ಈಗ ಎಲೆಕ್ಷನ್ ನಡೆಸಿ ಎಂದು ಹೇಳಿತೆ.

ಶ್ರೀ ಜೆ. ವೆಂಕಟಪ್ಪ.—ಕ್ಯಾಲೆಂಡರ್ ಆಫ್ ಇವೆಂಟ್ಸ್ ಅನೌನ್ಸ್ ಮಾಡಿದ ಮೇಲೆ ಸರ್ಕಾರದಲ್ಲಿ ಚುನಾವಣೆಗೆ ಸಂಬಂಧಪಟ್ಟವರು ಪುನಃ ಇಂಟರ್ ಫಿಯರ್ ಆಗುವುದಕ್ಕೆ ಇದ್ದ ಅವಕಾಶವಾದರೂ ಏನು ಎಂಬುದನ್ನು ತಿಳಿಸುತ್ತೀರಾ ?